## ಗಮನ ಸೆಳೆಯುವ ಸೂಚನೆ

**1964ನೇ ವಿಡಿಪಿ ಆಕ್ಟ್ ಪ್ರಕಾರ ಗ್ರಾಮದಲ್ಲಿನ ಅಪರಾಧ ತಡೆಗಟ್ಟಲು ನೇಮಿಸಿದ ಗ್ರಾಮ ದಳಪತಿಗಳಿಗೆ ಗುರುತಿನ ಚೀಟಿ ಹಾಗೂ ಗೌರವಧನ ನೀಡುವ ಬಗ್ಗೆ.**

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೇ, 1964ನೇ ವಿಡಿಪಿ ಆಕ್ಟ್ ಪ್ರಕಾರ ಗ್ರಾಮದಲ್ಲಿನ ಅಪರಾಧ ತಡೆಗಟ್ಟಲು ನೇಮಿಸಿದ ಗ್ರಾಮ ದಳಪತಿಗಳಿಗೆ ಗುರುತಿನ ಚೀಟಿ ಹಾಗೂ ಗೌರವಧನ ನೀಡುವ ಬಗ್ಗೆ ನಾನು ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಗ್ರಾಮ ರಕ್ಷಣಾ ದಳಗಳ ನಿಯಮಗಳು, 1965ರನ್ವಯ ನೇಮಕವಾಗುವ ಗ್ರಾಮದಳಗಳ ಸದಸ್ಯರು ಮತ್ತು ದಳಪತಿಗಳಿಗೆ ಒಂದು ಪ್ರಮಾಣ ಪತ್ರವನ್ನು ನಿಯಮ 7 ರಂತೆ ನೀಡಲಾಗುತ್ತಿದೆ. ಈ ಪ್ರಮಾಣಪತ್ರವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು (ಎಸ್.ಪಿ) ನೀಡುತ್ತಾರೆ. ಈ ಪ್ರಮಾಣ ಪತ್ರದಲ್ಲಿ ಸಂಬಂಧಿತ ವ್ಯಕ್ತಿಯ ಹೆಸರು ಮತ್ತು ಆ ವ್ಯಕ್ತಿಯನ್ನು ಯಾವ ಗ್ರಾಮದಳದ ಸದಸ್ಯ : ದಳಪತಿಯನ್ನಾಗಿ ನೇಮಕ ಮಾಡಲಾಗಿದೆಯೋ ಆ ಗ್ರಾಮದ ಹೆಸರಿರುತ್ತದೆ. ಗ್ರಾಮದಳದ ಸದಸ್ಯರ ಮತ್ತು ದಳಪತಿಗಳ ಈ ನೇಮಕಾತಿ ಆದೇಶವನ್ನು ಗುರುತಿನ ಚೀಟಿಯಾಗಿ ಉಪಯೋಗಿಸಬಹುದು. ಅವರಿಗೆ ಪ್ರತ್ಯೇಕವಾಗಿ ಗುರುತಿನ ಚೀಟಿ ನೀಡುವ ಅಗತ್ಯವಿಲ್ಲ.

2. ಕರ್ನಾಟಕ ಗ್ರಾಮ ರಕ್ಷಣಾ ದಳಗಳ ಅಧಿನಿಯಮ, 1964ರ ಕಲಂ 3ರ ಪ್ರಕಾರ ಪೊಲೀಸು ಅಧೀಕ್ಷಕರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ, ತಾವು ಅವಶ್ಯವೆಂದು ಪರ್ಯಾಲೋಚಿಸುವ ಗ್ರಾಮಗಳಿಗೆ ಗ್ರಾಮ ರಕ್ಷಣಾದಳಗಳೆಂದು ಕರೆಯಲಾಗುವ ಸ್ವಯಂಸೇವಕ ದಳಗಳನ್ನು (volunteer bodies) ರಚಿಸಲು ಅವರಿಗೆ ಸರ್ಕಾರದ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು ಎಂದಿದೆ. ಅದರಂತೆ ತಾನು ಗ್ರಾಮ ರಕ್ಷಣಾದಳದ ಸದಸ್ಯನಾಗಿ ಕಾರ್ಯನಿರ್ವಹಿಸುತ್ತೇನೆಂದು ಮುಂದೆ ಬಂದು, ಸಂಬಂಧಿತ ಜಿಲ್ಲಾ ಪೊಲೀಸು ಅಧೀಕ್ಷಕರಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಯನ್ನು, ಗ್ರಾಮ ರಕ್ಷಣಾದಳದ ಸದಸ್ಯ ಅಥವಾ ದಳಪತಿಗಳು ಸ್ವಯಂಪ್ರೇರಿತವಾಗಿ ಸ್ವಯಂಸೇವಕನಂತೆ ತಮ್ಮ ಗ್ರಾಮ ರಕ್ಷಣೆ ಮಾಡಲು ಮುಂದೆ ಬಂದಂತಹ ವ್ಯಕ್ತಿಗಳು. ಇವರು ಮಾಡುತ್ತಿರುವ ಗೌರವ (ಆನರರಿ) ಸೇವೆ. ಆದ್ದರಿಂದ, ಇವರಿಗೆ ಗೌರವಧನ ಅಥವಾ ಸಂಭಾವನೆಯನ್ನು ನೀಡುತ್ತಿಲ್ಲ.

ಅವರಿಗೆ ಗೌರವ ಧನವನ್ನೇನೂ ನಾವು ಕೊಡುತ್ತಿಲ್ಲ. ಹಿಂದಿನ ಸರ್ಕಾರ ಕೂಡ

ಕೊಟ್ಟಿಲ್ಲ. ಈಗಲೂ ಕೂಡ ಕೊಡತಕ್ಕಂಥ ನಿರ್ಣಯವನ್ನೂ ಕೂಡ ನಾವು ಮಾಡಿಲ್ಲ. ವಾಲೆಂಟರಿ ವರ್ಕ್ ಎಂದೇನು ಅವರು ತೆಗೆದುಕೊಂಡಿದ್ದಾರೋ ಅಂತಹವರಿಗೆ ಪಗಾರ ಕೊಟ್ಟು ನಾವು ಇಟ್ಟುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಸುಮಾರು 26ಸಾವಿರ ಹಳ್ಳಿಗಳಲ್ಲಿ ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಎಲ್ಲಾ ಸರ್ಕಾರಗಳೂ ಕೂಡ ಇದನ್ನು ವಾಲೆಂಟರಿ ಸೇವೆ ಎಂದೇ ಪರಿಗಣಿಸಿಕೊಂಡು ಬಂದಿವೆ. ಅವರಿಗೆ ಗೌರವ ಧನ ಅಥವಾ ಸಂಬಳ ಕೊಡಬೇಕೆಂಬ ನಿರ್ಣಯವನ್ನು ನಾವು ಮಾಡಿಲ್ಲ.

+ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸುಮಾರು 15 ಸಾವಿರ ಜನ ಗ್ರಾಮ ದಳಪತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶದ ಅಪರಾಧವನ್ನು ತಡೆಗಟ್ಟುವಲ್ಲಿ ಅಥವಾ ಅಪರಾಧಿಗಳನ್ನು ಪೊಲೀಸ್ ಇಲಾಖೆಗೆ ಹಿಡಿದು ಕೊಡುವಲ್ಲಿ ಮತ್ತು ಚುನಾವಣೆ ಸಂದರ್ಭದಲ್ಲಿ, ಧಾರ್ಮಿಕ ಉತ್ಸವ ಸಂದರ್ಭದಲ್ಲಿ ಅಥವಾ ಸಾರ್ವಜನಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಶಿಸ್ತನ್ನು ಶಾಂತತೆಯನ್ನು ಕಾಪಾಡುವಂತಹ ಸಂದರ್ಭದಲ್ಲಿ, ಈ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ಪೊಲೀಸ್ ಇಲಾಖೆಯ ಜೊತೆಯಲ್ಲಿ ಅವರ ಹೆಗಲಿಗೆ ಹೆಗಲು ಕೊಟ್ಟು ದುಡಿಯುವಂತಹ, ಒಂದು ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸುತ್ತಿರುವಂತಹ ಗ್ರಾಮ ದಳಪತಿಗಳು ಇವತ್ತು ನಮ್ಮ ರಾಜ್ಯದಲ್ಲಿದ್ದಾರೆ. 1964ನೇ ಇಸವಿಯಲ್ಲಿ ಸರ್ಕಾರ ಕರ್ನಾಟಕ ಗ್ರಾಮ ರಕ್ಷಣಾ ದಳಪತಿಗಳ ನಿಯಮವನ್ನು ಮಾಡಿದೆ. ಕಾನೂನಿನ 16(ಜ) ಸೆಕ್ಷನ್‌ನಲ್ಲಿ ಗೌರವಧನ ಮತ್ತು ಸಂಭಾವನೆ ಎನ್ನುವಂತಹ ಶೀರ್ಷಿಕೆಯ ಒಂದು ಕ್ಲಾಸ್ ಇದೆ. 'ಪ್ರತಿಯೊಬ್ಬ ದಳಪತಿಗಳಿಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ ಗೊತ್ತು ಪಡಿಸಬಹುದಾದಂತಹ ಗೌರವಧನವನ್ನು ಸಂದಾಯ ಮಾಡತಕ್ಕದ್ದು' ಎಂದು ಇದರಲ್ಲಿ ಇದೆ. ನಮ್ಮ ಸರ್ಕಾರ ಇದುವರೆಗೂ ಕೂಡ ಈ ಒಂದು 16 (ಜ)ದ ಅಂಶವನ್ನು ಕಾರ್ಯರೂಪಕ್ಕೆ ತಂದಿಲ್ಲ. ರಾಜ್ಯದಲ್ಲಿ ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಸರ್ಕಾರಕ್ಕೂ ಹಾಗೂ ಸಾರ್ವಜನಿಕರಿಗೂ ಕೂಡ ಮನದಟ್ಟಾಗಿದೆ. ಎರಡೂ ಪ್ರಮುಖ ಬೇಡಿಕೆಗಳ ಬಗ್ಗೆ ಸುಮಾರು 25 ವರ್ಷಗಳಿಂದ ಅವರು ರಾಜ್ಯ ಸರ್ಕಾರದೊಡನೆ ಮಾತುಕತೆ ಮಾಡುತ್ತಿದ್ದಾರೆ. ಮೊದಲನೆಯದಾಗಿ, ಅವರಿಗೆ ಗುರುತಿನ ಚೀಟಿ ವಿತರಿಸಬೇಕು. ಈಗಾಗಲೇ ನೇಮಕದ ಆದೇಶವನ್ನೇ ಅವರು ಗುರುತಿನ ಚೀಟಿಯಾಗಿ ತೆಗೆದುಕೊಳ್ಳಬಹುದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅನೇಕ ಜಿಲ್ಲೆಗಳಲ್ಲಿ ಪ್ರತ್ಯೇಕವಾದಂತಹ ಕಾರ್ಡ್‌ನ್ನು ಮಾಡಿ ಕೊಡುತ್ತಿದ್ದಾರೆ. ಹೇಗೆಂದರೆ ಎಂ.ಎಲ್.ಎ.ಗಳಿಗೆ ಹೇಗೆ ಕಾರ್ಡಗಳನ್ನು ಮಾಡಿ ಕೊಟ್ಟಿದ್ದಾರೋ ಆ ರೀತಿಯಾದಂತಹ ಕಾರ್ಡ್‌ಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಸ್.ಪಿ.ಗಳು ಮಾಡಿ ಕೊಟ್ಟಿದ್ದಾರೆ. ಆ ರೀತಿ ಕಾರ್ಡ್‌ನ್ನು ಮಾಡಿ ಕೊಟ್ಟರೆ, ಅವರು ಸೇವೆಯನ್ನು ಸಲ್ಲಿಸುವಾಗ ಅವರಿಗೆ ನಾವು ಒಂದು ರೀತಿಯ ಗೌರವವನ್ನು ಕೊಟ್ಟಂತಾಗುತ್ತದೆ. ಆದ್ದರಿಂದ ಪ್ರತ್ಯೇಕವಾದ ಗುರುತಿನ ಚೀಟಿಯನ್ನು ಕೊಡಲಿಕ್ಕೆ

ಪೊಲೀಸ್ ಇಲಾಖೆಯ ವರಿಷ್ಠಾಧಿಕಾರಿಗಳಿಗೆ ಮಾನ್ಯ ಮಂತ್ರಿಗಳು ಸೂಚನೆ ನೀಡಿದರೆ ಅವರು ಮಾಡಿಕೊಡುತ್ತಾರೆ. ಕೊಪ್ಪಳದಲ್ಲಿ ಆ ರೀತಿ ಮಾಡಿ ಕೊಟ್ಟಿದ್ದಾರೆ. ಉತ್ತರ ಕನ್ನಡ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಆ ರೀತಿ ಏಕೆ ಮಾಡಿ ಕೊಟ್ಟಿಲ್ಲ? ಕೊಪ್ಪಳ ಜಿಲ್ಲೆಯಲ್ಲಿ ಎಸ್.ಪಿ.ಗಳು ಗುರುತಿನ ಚೀಟಿಗಳನ್ನು ವಿತರಿಸುವುದಕ್ಕೆ ಸಾಧ್ಯವಿದ್ದರೆ ಬೇರೆ ಬೇರೆ ಜಿಲ್ಲೆಗಳ ಎಸ್.ಪಿ.ಗಳಿಗೆ ಆ ರೀತಿ ಮಾಡಲಿಕ್ಕೆ ಏಕೆ ಸಾಧ್ಯವಿಲ್ಲ? ಆದ್ದರಿಂದ ಪ್ರತ್ಯೇಕವಾದಂತಹ ಐಡೆಂಟಿಟಿ ಕಾರ್ಡ್‌ನ್ನು ಅವರಿಗೆ ಮಾಡಿಕೊಡುವುದಕ್ಕೆ ಮಾನ್ಯ ಮಂತ್ರಿಗಳು ನಿರ್ದೇಶನ ಕೊಡಬೇಕು. ಇನ್ನು ಗೌರವಧನದ ಬಗ್ಗೆ ಹೇಳುವುದಾದರೆ, ನಾವು ನಮ್ಮ ರಾಜ್ಯದಲ್ಲಿ ಅನೇಕರಿಗೆ ಗೌರವಧನವನ್ನು ಈಗ ಕೊಡುತ್ತಿದ್ದೇವೆ. ನಾನು ಅದನ್ನೆಲ್ಲಾ ಇಲ್ಲಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಮಾಡುತ್ತಿರುವ ಸೇವೆಗೆ ನಾವು ಸ್ವಲ್ಪವಾದರೂ ಕೂಡ ಗೌರವ ಕೊಡಬೇಕು. ಅದು ಧನದ ರೂಪದಲ್ಲೇ ಇರಬೇಕೆಂದೇನೂ ಇಲ್ಲ. ಇಂತಿಷ್ಟೇ ಗೌರವಧನ ಕೊಡಬೇಕೆಂದು ನಾನು ಕೇಳುತ್ತಿಲ್ಲ, ಸ್ವಲ್ಪವಾದರೂ ಗೌರವಧನ ನಾವು ಅವರಿಗೆ ಕೊಡಲೇಬೇಕು. 15 ಸಾವಿರ ಜನ ಇವತ್ತು ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸೇವೆ ನಮಗೆ ಅಗತ್ಯವಾಗಿದೆ. ಅವರ ಸೇವೆಯನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆ. ಆ ಹಿನ್ನೆಲೆಯಲ್ಲಿ ಅವರ ನೇಮಕದ ಆದೇಶವನ್ನೇ ಗುರುತಿನ ಚೀಟಿಯಾಗಿ ಮಾಡದೇ ಪ್ರತ್ಯೇಕವಾಗಿ ಅವರಿಗೆ ಗುರುತಿನ ಚೀಟಿಯನ್ನು ಕೊಡಬೇಕು ಮತ್ತು ಅವರ ಗೌರವ ಸೇವೆಗೆ ಗೌರವ ಧನವನ್ನು ಕೊಟ್ಟು ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಸರ್ಕಾರ ಮಾಡಬೇಕೆಂದು ಹೇಳುತ್ತಾ, ದಳಪತಿಗಳ 25 ವರ್ಷಗಳ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕೆಂದು ನಾನು ಒತ್ತಾಯ ಮಾಡಬಯಸುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಪಿ.ಹೆಚ್.ಪೂಜಾರ್: ಮಾನ್ಯ ಅಧ್ಯಕ್ಷರೆ, ಹಿಂದಿನ ಎಲ್ಲಾಸರ್ಕಾರಗಳು ಗ್ರಾಮ ದಳಪತಿಗಳಿಗೆ ಭರವಸೆಕೊಟ್ಟು ಅವರ ಕಣ್ಣಿಗೆ ಮಣ್ಣೆರಚಿದೆ ಎಂದರೆ ತಪ್ಪಾಗಲಾರದು. ಹಿಂದೆ ಮಾನ್ಯ ವಿರೇಂದ್ರಪಾಟೀಲರ ಕಾಲದಲ್ಲಿ ಹಾಗೂ ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಭರವಸೆಯನ್ನು ಕೊಟ್ಟು ದಳಪತಿಗಳಿಗೆ ಗುರುತಿನ ಚೀಟಿ ಹಾಗೂ ಗೌರವಧನವನ್ನು ಕೊಡುತ್ತೇವೆ ಎಂದು ಹೇಳಿದ್ದರು. ಗ್ರಾಮ ದಳಪತಿಗಳು ಹೆಚ್ಚಿನ ಕಾರ್ಯಕ್ಷಮತೆಯಿಂದ ಕೆಲಸ ಮಾಡಲು ಬೇಕಾದ ಅನುಕೂಲಗಳನ್ನು ಮಾಡಿಕೊಡಲಾಗುವುದಲ್ಲದೇ ಗೌರವಧನವನ್ನು ಕೂಡ ಕೊಡುತ್ತೇವೆ ಎಂದು ಇದೇ ಕಾಂಗ್ರೆಸ್ ಸರ್ಕಾರ ಹಿಂದೆ ಭರವಸೆಯನ್ನು ಕೊಟ್ಟಿತ್ತು. ಇಂದು ಈ ವಿಷಯವನ್ನು ನಾನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಇಂದು ಗ್ರಾಮ ದಳಪತಿಗಳ ಸೇವೆಯನ್ನು ಶ್ಲಾಘನೆ ಮಾಡಬೇಕಾಗಿದೆ. ತೋಟಿ-ತಳವಾರರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು ಅದಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯಿಂದ ಅವರು ಕೆಲಸ ಮಾಡುತ್ತಿದ್ದಾರೆ. ಆ ಗ್ರಾಮ ದಳಪತಿಗಳು ಹೆಣ ಕಾಯಬೇಕಾದ ಪರಿಸ್ಥಿತಿಯಲ್ಲೂ ಕೂಡ ಹಿಂದೆ ಮುಂದೆ ನೋಡದೇ ಕೆಲಸ ಮಾಡುತ್ತಿದ್ದಾರೆ. ಇಂಥವರಿಗೆ

ಗೌರವಧನವನ್ನು ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಸುಮಾರು 15 ಸಾವಿರ ಗ್ರಾಮ ದಳಪತಿಗಳು ಇಡೀ ಕರ್ನಾಟಕದಲ್ಲಿ ಕೆಲಸ ಮಾಡುತ್ತಿರುವುದು ನಿಜವಾದ ಸಂಗತಿಯೇ ಆಗಿದೆ. ತಮಗೆಲ್ಲರಿಗೂ ದಳಪತಿಗಳ ನೇಮಕ ಯಾವ ರೀತಿಯಲ್ಲಿ ಆಗುತ್ತದೆ ಎಂಬುದು ಗೊತ್ತಿರುವ ವಿಚಾರವೇ ಆಗಿದೆ. ಇನ್ನು ಅವರಿಗೆ ಗೌರವಧನವನ್ನು ಕೊಡತಕ್ಕಂಥ ಕೆಲಸ ಇಲ್ಲಿಯವರೆಗೂ ಆಗಿಲ್ಲ. ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ ಹಾಗೆ (16)ಬಿ ಪ್ರಕಾರ ಗೌರವಧನ ಕೊಡಬೇಕೆಂದು ಇದೆ. ಆದರೆ ಎಲ್ಲಾ ಸರ್ಕಾರಗಳು ಕೂಡ ಹಣದ ಅಭಾವದಿಂದ ಮತ್ತು ಈ ಕೆಲಸ 'ಹಾನರರಿ ವರ್ಕ್' ಆಗಿದ್ದ ಕಾರಣದಿಂದಾಗಿ ಯಾರೂ ದಳಪತಿಗಳಿಗೆ ಗೌರವಧನವನ್ನು ಕೊಟ್ಟಿಲ್ಲ. ಈಗಲೂ ಕೂಡ ಅವರಿಗೆ ಗೌರವಧನವನ್ನು ಕೊಡಬೇಕೆಂದು ನಾವು ನಿರ್ಣಯವನ್ನು ತೆಗೆದುಕೊಂಡಿಲ್ಲ. ಅವರು ಗೌರವಧನ ಕೊಡಬೇಕೆಂದೇನೋ ಹೇಳುತ್ತಾರೆ. ಆದರೆ ಹಿಂದೆ ಮಾನ್ಯ ಸಿಂಧ್ಯಾರವರು ಮಂತ್ರಿಯಾಗಿದ್ದಾಗ ಈ ವಿಷಯದ ಬಗ್ಗೆ ಪರಿಶೀಲನೆಯನ್ನು ಮಾಡಿದ್ದಾರೆ. ಈ ದಳಪತಿ ಹುದ್ದೆಗಳನ್ನು ಮುಂದುವರಿಸಬೇಕೋ ಅಥವಾ ತೆಗೆದೇ ಹಾಕಿಬಿಡಬೇಕೋ ಎಂಬ ಬಗ್ಗೆ ಪರಿಶೀಲನೆ ಆಗಬೇಕಾಗಿದೆ. ಏಕೆಂದರೆ ಇವರ ನೇಮಕದಲ್ಲಿ ಹಲವಾರು ಕೈವಾಡಗಳು ಇರಬಹುದು, ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ತಮಗೆ ಬೇಕಾದವರನ್ನು ನೇಮಕ ಮಾಡಿಕೊಂಡಿರಬಹುದು, ಇನ್ನೊಂದು ಪಕ್ಷ ಬಂದಾಗ ಒತ್ತಡ ತಂದು ಅವರನ್ನು ತೆಗೆಯುವ ಕೆಲಸಗಳು ನಡೆದುಕೊಂಡು ಬರುತ್ತಲೇ ಇದೆ. ಇದೇ ಕಾರಣದಿಂದ ಮಾನ್ಯ ಸಿಂಧ್ಯಾರವರು ಅವರ ಅಧಿಕಾರವಧಿಯಲ್ಲಿ ದಳಪತಿ ಹುದ್ದೆಯನ್ನು ತೆಗೆಯಬೇಕೆಂದು ಒಂದು ಆರ್ಡರ್‌ನ್ನು ಮಾಡಿದರು. ಪುನಃ ಒತ್ತಡ ಬಂದಮೇಲೆ ಅದನ್ನು ಅಬೇಯನ್ಸ್‌ನಲ್ಲಿ ಇಟ್ಟರು. ಈಗಲೂ ಅದು ಅಬೇಯನ್ಸ್‌ನಲ್ಲಿದೆ. ಅವರು ಈಗಲೂ ಅಬೇಯೆನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಗೌರವಧನ ಕೊಡಬೇಕೆಂದರೆ ಬಜೆಟ್‌ನಲ್ಲಿ ಈ ಬಗ್ಗೆ ಪ್ರಾವಿಷನ್ ಮಾಡಿಕೊಳ್ಳದೇ ಹೋದರೆ ಗೌರವಧನವನ್ನು ಕೊಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಪರಿಶೀಲನೆಯನ್ನು ನಾವು ಮಾಡುತ್ತಿದ್ದೇವೆ. ದಳಪತಿ ಹುದ್ದೆಯನ್ನು ಹಾಗೆಯೇ ಇಡಬೇಕೋ ಅಥವಾ ತೆಗೆದು ಹಾಕಬೇಕೋ ಎಂಬ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದರ ಬಗ್ಗೆಯೂ ತೀರ್ಮಾನ ಆಗಬೇಕಾಗಿದೆ. ದಳಪತಿ ಹುದ್ದೆಯನ್ನು ಇಡಬೇಕು ಎಂದಾಗ ಗೌರವಧನವನ್ನು ಎಷ್ಟು ಕೊಡಬೇಕು ಮತ್ತು ಈ ಹುದ್ದೆಯನ್ನು ಯಾವ ರೀತಿಯಾಗಿ ಮುಂದುವರೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಸದ್ಯಕ್ಕೆ ಅವರಿಗೆ ಗೌರವಧನವನ್ನು ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಮಾನ್ಯ ಸದಸ್ಯರು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ 3-00 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.